ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 898/2020 .

ಪ್ರಾ.ಸಾ. :7
ಚಾ.ಸಾ. :12

ಹೆಸರು : ಸಂತೋಷ್ ಹುಗಾರ್
ತಂದೆಯ ಹೆಸರು : ಮನೋಹರ್
ವಯಸ್ಸು : 31 ವರ್ಷ
ಉದ್ಯೋಗ : RFO
ವಿಳಾಸ : ಮೈಸೂರು

... ........................................................................................................... ...

ದಿನಾಂಕ 13 ನೇ ಫೆಬ್ರವರಿ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ :-

ದಿಃ- 28.08.2020 ರಲ್ಲಿ ಆರೋಪಿ 4 ರವರ ಮನೆಗೆ ನಾನು ಚಾಸಾ - 9 ಹಾಗೂ ಇತರೆ ಸಿಬ್ಬಂದಿ ಹೋದೆವು. ಆರೋಪಿ 4 ಹಾಜರಿಲಿಲ್ಲ. ಅವರ ತಾಯಿ ಹಾಜರಿದ್ದು, ತಮ ಮಗ ಇಲ್ಲ ಎಂದು ತಿಳಿಸಿದರು. ಚಾಸಾ- 9 ರವರ ಮೂಲಕ ಮನೆಯಲ್ಲಿ ಪರಿಶೀಲಿಸಿದೆವು. 1 ಬಳಕೆ ಮಾಡಿದ ಕಾಡು ತೊಸು, ಗನ್ ಪೌಡರ್ ಸಿಕ್ಕಿತು. ಸ್ಥಳದಲ್ಲಿ ವಿಡಿಯೋ ಮಡಿ ಮಹಜರು ಮಾಡಿ ಅಮಾನತ್ತುಪಡಿಸಿದರು. ನಾನು ಸಹ ಮಹಜರಿಗೆ ಸಹಿ ಹಾಕಿದ್ದೇನು.

ದಿಃ- 01.09.2020 ರಂದು ಆರೋಪಿ 4 ರವನ್ನು ಕರೆದುಕೊಂಡು ಅವರು ತೋರಿಸಿದ ಸ್ಥಳ, ಆರೋಪಿ 4 ರವರು ಮನೆಯ ಬಳಿ ಅಡಿಕೆ ತೋಟಕ್ಕೆ ಹೋದೆವು. ಅಡಿಕೆ ಮರದ ಕೆಳಗಡೆ ಒಂದು ಪ್ಲಾಸ್ಟಿಕ್ ಚೀಲದಲ್ಲಿಹುಲಿಯ 2 ಕೊರೆ ಹಲ್ಲುಗಳು, ನಾಲ್ಕು ಉಗುರುಗಳು ಇದ್ದವು. ಆ ದಿನ ಜೊತೆ ಚಾಸಾ- 15 ಚಾಸಾ- 8, ಚಾಸಾ-9, ಸತೀಶ್ ರವರು ಹಾಜರಿದ್ದರು. ಸದರಿ ಕೊರೆ ಹಲ್ಲುಗಳು, ಉಗುರುಗಳನ್ನು ಮಹಜರು ಮಾಡಿ ಅಮಾನತ್ತುಪಡಿಸಿದೆವು. ನಾನು ಸಹ ಮಹಜರಿಗೆ ಸಹಿ ಹಾಕಿದ್ದೇನು. ಸಾಕ್ಷಿಸಹಿಯನ್ನು ದಿಃ- 28.08.2020 ರ ಮಹಜರನ್ನು ನಿಪಿ- 31, ಸಾಕ್ಷಿ ಸಹಿ ನಿಪಿ-31 ಎ, ದಿಃ- 01.09.2020 ರ ಮಹಜರನ್ನು ನಿಪಿ-32, ಸಾಕ್ಷಿ ಸಹಿ 32 ಎ, 2 ಪೋಟೋಗಳನ್ನು ನಿಪಿ- 33 ಮತ್ತು 34,35, 36, 37, 38, 39 ಎಂದು ಗುರುತಿಸಲಾಯಿತು. ಕಾಡು ತೊಸನ್ನು M.O. 13, ಗನ್ ಪೌಡರ್ ಅನ್ನು 14 ಎಂದು ಗುರುತಿಸಲಾಯಿತು. ಈ ಬಗ್ಗೆ ಹೇಳಿಕೆಯನ್ನು ತನಿಖಾಧಿಕಾರಿಗೆ ಹೇಳಿರುತ್ತೇನೆ.

ಹುಲಿಯ ಕೊರೆ ಹಲ್ಲುಗಳು, ಉಗುರುಗಳನ್ನು ನ್ಯಾಯಾಲಯದ ಅನುಮತಿ ಪಡೆದು ನಾಶ ಪಡಿಸಿರುತ್ತೇನೆ. ಆರೋಪಿ 4 ಅನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು :- ಆರೋಪಿ ಪರ ವಕೀಲರವರಿಂದ :-

ನಾವು ಆರೋಪಿ ಮನಗೆ ಶೋಧನಾ ವಾರೆಂಟ್ ಅನ್ನು ತೆಗೆದುಕೊಂಡು ಹೋಗಿದ್ದೆವು. ಟೌನ್ ಮೂಲಕ Public ರಸ್ತೆಯ ಮೂಲಕ ಆರೋಪಿ ಮನೆಗೆ ಹೋಗಿದ್ದೆವು. ನಾನು Public ರನ್ನು ಮಹಜರಿಗೆ ಹೋಗಿರಲಿಲ್ಲ ಏಕೆಂದರೆ Public ರು ಸಹ ಸಹಕರಿಸಲಿಲ್ಲ ಎನ್ನುತ್ತಾರೆ. ಆರೋಪಿ 4 ರವರ ತಾಯಿ ಸಾಕ್ಷಿಯಾಗಲು ಒಪ್ಪಲಿಲ್ಲ. ಅಮಾನತ್ತುಪಡಿಸಿದೆ ವಸ್ತುಗಳ ಮೇಲೆ ನಾವು ಸಹಿ ಹಾಕಿಲ್ಲ ಎಂದರೆ ಸರಿ. ಮುದ್ದೆ ಮಾಲು 13 ರ ಮೇಲೆ ನನ್ನ ಅಥವಾ ಸಿಬ್ಬಂದಿಯ ಸಹಿ ಇಲ್ಲ ಎಂದರೆ ಸರಿ. ಮುದ್ದೆ ಮಾಲು 15 ಅನ್ನು ಗನ್ ಪೌಡರ್ ಎಂದು ನಾನು ಹೇಳುತ್ತಿದ್ದೇನೆ. ಪರಿಣಿತರ ಅಭಿಪ್ರಾಯ ಪಡೆದಿಲ್ಲ ಎಂದರೆ ಸರಿಯಲ್ಲ. ನಮಗೆ ತರಬೇತಿ ಸಮಯದಲ್ಲಿ ಗನ್, ಗನ್ ಪೌಡರ್ ಬಗ್ಗೆ ವಿಶೇಷ ತರಬೇತಿ ನೀಡಲಾಗುತ್ತದೆ. ಸದರಿ ತರಬೇತಿ ಬಗ್ಗೆ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ. ಮುದ್ದೆ ಮಾಲು 15 Welding ಮಾಡುವಾಗ ಸಿಗುವ ಪೌಡರ್ ಎಂದರೆ ಸರಿಯಲ್ಲ. ಮು.ಮಾ 15 ಅನ್ನು FSL ಗೆ ಕಳುಹಿಸಲು ತೊಂದರೆ ಇಲ್ಲ. ಕಾಡು ತೋಸುಗಳು ಸಾಮಾನ್ಯವಾಗಿ ಕೊಡಗಿನಲ್ಲಿ ಎಲ್ಲರ ಮನೆಯಲ್ಲಿ ಬಳಸಿ ಬಿಸಾಡುತ್ತಾರೆ ಎಂದರೆ ಸರಿ.

ದಾರಿಯಲ್ಲಿ ಸಿಕ್ಕಿಂದತಹ ಖಾಲಿ ಕಾಡು ತೋಸನ್ನುಇಲ್ಲಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ವಿಡಿಯೋ ವನ್ನು ನಮ್ಮ ಸಿಬ್ಬಂದಿ ನಾನಾ ಬಾಬಾ ಪರಿಜ್ ಮಾಡಿದ್ದಾರೆ ಹಾಗೂ ಅವರು ತರಬೇತಿ ಸಹ ಹೊಂದಿದ್ದಾರೆ. ನಾನು ಆರೋಪಿ 4 ರವರ ಮನೆಗೆ ಹೋಗಿಲ್ಲ ಹಾಗೂ ಮು. ಮಾ ಗಳನ್ನು ಅಮಾನತ್ತುಪಡಿಸಿಲ್ಲ ಎಂದರೆ ಸರಿಯಲ್ಲ. ವಿಡಿಯೋ ವನ್ನ, ಪೋಟೋಗಳನ್ನು ಸೃಷ್ಟಿಸಿದದ್ದೇನೆ ಎಂದರೆ ಸರಿಯಲ್ಲ. ನಾವು ಆರೋಪಿ 4 ರ ಮನೆಗೆ ಹೋಗದ ಕಾರಣ ಸಾರ್ವಜನಿಕರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಅರಣ್ಯದ ಹೊರೆಗೆ ಸಿಕ್ಕ ಉಗುರನ್ನು ಈ ಪ್ರಕರಣಕ್ಕೆ ಹಾಜರು ಪಡಿಸಿದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗೆ ಸಹಾಯ ಮಾಡಲು ಸುಳ್ಳು, ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಕ್ಷತಾ ಅರಣ್ಯ ಗಳಲ್ಲಿ ಯಾವುದೇ ಪ್ರಾಣಿ ಮೃತರಾದರೆ ಈ ಬಗ್ಗೆ ವರದಿ ಸಲ್ಲಿಸಲು ಮೇಲಾಧಿಕಾರಿಯಿಂದ ಒತ್ತಡ ಇರುತ್ತದೆ ಎಂದರೆ ಸರಿಯಲ್ಲ. ಪ್ರಾಣಿಗಳು ಜಗಳ ಮಾಡಿ ಮೃತ ಗೊಂಡಿದ್ದು, ನಾವು ಅರೋಪಿತರ ವಿರುದ್ಧ, ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ , ಆರೋಪಿತರಿಗೂ, ಮು.ಮಾಲಗಳಿಗೂ ನನ್ನ ಸಾಕ್ಷ್ಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ** :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)